**ಮಾನ್ಯ ಸಿವಿಲ್ ನ್ಯಾಯಾಧೀಶರು ವ ಜೆ ಎಂ ಎಫ್‌ಸಿ ಮುದ್ದೇಬಿಹಾಳ, ಇವರ ನ್ಯಾಯಾಲಯ**

ಸಿ ಸಿ ನಂಃ 702/2017
ಸಿಡಬ್ಲ್ಯೂ-5
ಪಿ.ಡಬ್ಲ್ಯೂ-5

| | | |
|---|---|---|
| ಸಾಕ್ಷಿದಾರನ ಹೆಸರು | ಃ | ಶರಣಪ್ಪ ಕೊನ್ನೂರ |
| ತಂದೆಯ ಹೆಸರು | ಃ | ಸಾಹೆಬಣ್ಣ |
| ವಯಸ್ಸು | ಃ | 60 ವರ್ಷ, |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ಗುಂಡಕನಾಳ |

(ದಿಃ13/02/2023 ರಂದು ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು)

**ಮುಖ್ಯ ವಿಚಾರಣೆ ಸ ಸ ಅ ಅವರಿಂದ**

ಸಾಕ್ಷಿಗೆ ಈಗ ಒಂದು ದಾಖಲಾತಿಯನ್ನು ತೋರಿಸಲಾಗಿ, ಅದರಲ್ಲಿನ ತನ್ನ ಹೆಬ್ಬಟ್ಟಿನ ಗುರತನ್ನು ನೋಡಿ ಗುರುತಿಸಿದ್ದು, ಅದು ಗುನ್ಹೆ ಸ್ಥಳ ಪಂಚನಾಮೆ ಆಗಿದ್ದು, ಸದರಿ ಗುನ್ಹೆ ಸ್ಥಳ ಪಂಚನಾಮೆಯನ್ನು ಈಗಾಗಲೆ ನಿಪಿ: 5 ಎಂದು ಗುರುತಿಸಲಾಗಿದೆ. ನಿಪಿ: 5 ರಲ್ಲಿ ಬರೆದ ವಿಷಯಗಳು ನನಗೆ ಗೊತ್ತಿರುವುದಿಲ್ಲ. ಅದಕ್ಕೆ ಸಂಬಂದಪಟ್ಟ ಭಾವಚಿತ್ರವನ್ನು ಈಗಾಗಲೆ ನಿಪಿ: 7 ಎಂದು ಗುರುತಿಸಲಾಗಿದೆ.

ಸಾಕ್ಷಿಗೆ ಈಗ ಇನ್ನೊಂದು ದಾಖಲಾತಿಯನ್ನು ತೋರಿಸಲಾಗಿ ಅದರ ಮೇಲಿನ ತನ್ನ ಹೆಬ್ಬಟ್ಟಿನ ಗುರುತನ್ನು ಗುರುತಿಸಿದ್ದು, ಅದು ಹಾತ್ ನಕಾಶೆ ಆಗದ್ದು ಸದರಿ ದಾಖಲಾತಿಯನ್ನು ಈಗಾಗಲೆ ನಿಪಿ: 6 ಎಂದು ಗುರುತಿಸಲಾಗಿರುತ್ತದೆ.

ಸಾಕ್ಷಿಗೆ ಈಗ ಇನ್ನೊಂದು ದಾಖಲಾತಿಯನ್ನು ತೋರಿಸಲಾಗಿ, ಅದರಲ್ಲಿನ ತನ್ನ ಹೆಬ್ಬಟ್ಟಿನ ಗುರತನ್ನು ನೋಡಿ ಗುರುತಿಸಿದ್ದು, ಸದರಿ ದಾಖಲಾತಿ ವಾಹನ ತಡೆ ಪಂಚನಾಮೆ ಆಗಿದ್ದು, ಸದರಿ ವಾಹನ ತಡೆ ಪಂಚನಾಮೆಯನ್ನು ಈಗಾಗಲೆ ನಿಪಿ:8 ಎಂದು ಗುರುತಿಸಲಾಗಿರುತ್ತದೆ. ನಿಪಿ: 8 ರಲ್ಲಿ ಬರೆದ ವಿಷಯಗಳು ನನಗೆ ಗೊತ್ತಿರುವುದಿಲ್ಲ. ಅದಕ್ಕೆ ಸಂಬಂದಪಟ್ಟ ಭಾವಚಿತ್ರವನ್ನು ಈಗಾಗಲೆ ನಿಪಿ: 3 ಎಂದು ಗುರುತಿಸಲಾಗಿದೆ.

(ಈ ಹಂತದಲ್ಲಿ ಸ ಸ ಅ ಅವರು ಸಾಕ್ಷಿಯನ್ನು ಪ್ರತೀಕೂಲ ಸಾಕ್ಷಿ ಅಂತಾ ಪರಿಗಣಿಸಿ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)

<u>**ಪಾಟೀ ಸವಾಲುಃ ಸ ಸ ಅ ಅವರಿಂದ**</u>

ದಿನಾಂಕ 17-07-2017 ರಂದು ಬೆಳಿಗ್ಗೆ 10 ಗಂಟೆಗೆ ಪೊಲಿಸರು ನನ್ನನ್ನು ಮತ್ತು ಚಾಸಾ: 4 ರವರನ್ನು ಗುನ್ನೆ ಸ್ಥಳಕ್ಕೆ ಕರೆಸಿ ನಮ್ಮ ಸಮಕ್ಷಮ ಗುನ್ನೆ ಸ್ಥಳ ಪಂಚನಾಮೆ ಕೈಗೊಂಡಿರುತ್ತಾರೆ ಎಂದರೆ ಸರಿಯಲ್ಲ. ಬೆಳಿಗ್ಗೆ 10 ಗಂಟೆಯಿಂದ 11 ಗಂಟೆಯವರೆಗೆ ಚಾಸಾ: 7 ರವರು ತೋರಿಸಿರುವ ಜಾಗೆಯಲ್ಲಿ ನಿಪಿ: 5 ರಂತೆ ಪಂಚನಾಮೆ ಬರೆದು ನಿಪಿ: 6 ರಂತೆ ಹಾತ್ ನಕಾಶೆ ತಯಾರಿಸಿ ನಿಪಿ: 7 ರಂತೆ ಭಾವಚಿತ್ರ ತೆಗೆದಿದ್ದರೂ ಸಹ ಆರೋಫಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಅದೇ ರೀತಿ ದಿನಾಂಕ 17-07-2017 ರಂದು ಮದ್ಯಾಹ್ನ 12.ಗಂಟೆಗೆ ಪೊಲಿಸರು ನನ್ನನ್ನು ಮತ್ತು ಚಾಸಾ: 4 ರವರನ್ನು ಪೊಲೀಸ ಠಾಣೆಗೆ ಕರೆಸಿ ನಮ್ಮ ಸಮಕ್ಷಮ ವಾಹನ ತಡೆ ಪಂಚನಾಮೆ ಕೈಗೊಂಡಿರುತ್ತಾರೆ ಎಂದರೆ ಸರಿಯಲ್ಲ. ಮದ್ಯಾಹ್ನ 12 ರಿಂದ 1 ಗಂಟೆಯವರೆಗೆ ನಿಪಿ: 8 ರಂತೆ ಪಂಚನಾಮೆ ಬರೆದು ನಿಪಿ: 3 ರಂತೆ ಭಾವಚಿತ್ರ ತೆಗೆದಿದ್ದರೂ ಸಹ ಆರೋಫಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>**ಪಾಟಿ ಸವಾಲು ಆರೋಪಿ ಪರವಾಗಿ ಪಾಟೀಸವಾಲು ಇಲ್ಲ ಎಂದು ಹೇಳಿರುತ್ತಾರೆ.**</u>

ಓ ಹೇ ಕೇ ಸರಿ ಅದೆ.

ನ್ಯಾ ದಂ ಪ್ರ ವರ್ಗ, ಮುದ್ದೇಬಿಹಾಳ.